ಶ್ರೀ ಗುರುಭ್ಯೋನಮಃ  ಶ್ರೀ ರಾಘವೇಂದ್ರಾಂತರ್ಗತ ಶ್ರೀ ವಾದಿರಾಜಾಂತರ್ಗತ

ಶ್ರೀ ಮಧ್ವಾಂತರ್ಗತ ಶ್ರೀ ಶೀಬೀ ಲಕ್ಷೀ ನರಸಿಂಹಾಯ ನಮಃ ॥

॥ಶ್ರೀ ಗರುಡವಾಹನ ಶ್ರೀ ಲಕ್ಷ್ಮೀನಾರಾಯಣಾಯ ನಮಃ ॥

ಶ್ರೀವಾಯುಹನುಮದ್ಭೀಮಗುರುಭ್ಯೋನಮಃ

ಶ್ರೀಲಾತವ್ಯವಾದಿರಾಜತೀರ್ಥಗುರುಭ್ಯೋನಮಃ

ಶ್ರೀರಾಘವೇಂದ್ರತೀರ್ಥಗುರುಭ್ಯೋನಮಃ

ಶ್ರೀಬನ್ನಂಜೆರಾಘವೇಂದ್ರತೀರ್ಥಗುರುಭ್ಯೋನಮಃ

ಪೃಥ್ವೀಮಂಡಲಸ್ಥ ಸಕಲಸದ್ವೈಷ್ಣವೇಭ್ಯೋ ನಮಃ

## ಶ್ರೀಮದ್ಭಾಗವತ ಮಹಾತ್ಮೆಯು

ಪುರಾಣಗಳಲ್ಲಿ ಭಾಗವತ ಅತ್ಯಂತ ಉತ್ತಮವಾದ ಪುರಾಣವು. ಪದ್ಮಪುರಾಣದಲ್ಲಿ ವಿಶೇಷವಾಗಿ ಅದರ ಮಹಿಮೆಯು ಹೇಳಲ್ಪಟ್ಟಿದೆ. ಅದರಲ್ಲಿ ಶ್ರೀಮದ್ಭಾಗವತವನ್ನು  ಮೂರು ವಿಧವಾಗಿ ಕೇಳುವುದನ್ನು  ಹೇಳಿರುತ್ತಾರೆ. ಒಂದು ಯಾವಗಲೂ ಕೇಳುವುದು. ಇನ್ನೊಂದು ತಿಂಗಳಿನಲ್ಲಿ, ಮತ್ತೊಂದು ಏಳು ದಿವಸಗಳಲ್ಲಿ ಕೇಳುವುದು. ಅದನ್ನು ಭಾಗವತಸಪ್ತಾಹವೆನ್ನುವರು. ಯಾವ ಕಾರ್ಯವನ್ನಾದರೂ ನಿಯಮಪೂರ್ವಕವಾಗಿ ಮಾಡಿದರೆ ಫಲವು ಹೆಚ್ಚಿಗೆ  ಸಿಗುವುದು. ಆದರೆ ಕಲಿಯುಗದಲ್ಲಿ ಯಾವಗಲೂ ನಿಯಮದಿಂದ ಇರುವುದು ಕಷ್ಟ ಆದರೆ ಏಳು ದಿವಸವಿರಬಹುದು. ಆದುದರಿಂದ ಭಾಗವತ ಸಪ್ತಾಹವು ಪ್ರಶಸ್ತವು. ಕಲಿಯುಗದಲ್ಲಿ ಭಾಗವತ ಸಪ್ತಾಹಯಜ್ಞವು ಪರಮ ಪ್ರಶಸ್ತವಾಗಿರುವುದು. ಐಹಿಕಾಮುಷ್ಮಿಕ ಪುರುಷಾರ್ಥಗಳಿಗೆ ಕಾರಣವಾಗಿರುವುದು. ಗರ್ಭಿಣಿಯರಾಗದಿರುವ ಅಥವಾ ಗರ್ಭಸ್ರಾವವಾಗುವ ಹೆಂಗಸರು ಭಕ್ತಿಯಿಂದ





ಭಾಗವತ ಸಪ್ತಾಹವನ್ನು  ಕೇಳಿದರೆ ಅವರು ಗರ್ಭಿಣಿಯರಾಗುವರು. ವಿವಾಹವಾಗದಿರುವ ಕನ್ಯೆಯರು ಇದನ್ನು ಕೇಳಿದರೆ ಸದ್ಗುಣಭರಿತನಾದ ಪತಿಯನ್ನು ಹೊಂದವರು. ದರಿದ್ರನು ಇದನ್ನು ಕೇಳುವುದರಿಂದ ಸಮೃದ್ಧವಾದ ಐಶ್ವರ್ಯವನ್ನು ಹೊಂದುವನು, ಉದ್ಯೋಗವಿಲ್ಲದವನು ಇದ್ನು ಕೇಳಿದರೆ ಉತ್ತಮ ಉದ್ಯೋಗವನ್ನು ಹೊಂದವನು. ವಿದ್ಯೆ ತಲೆಗೆ ಹಿಡಿಯದಿದ್ದ ಪಕ್ಷದಲ್ಲಿ ವಿದ್ಯಾವಂತರಾಗಬೇಕೆಂಬ ಇಚ್ಛೆಯುಳ್ಳವರು ಭಕ್ತಿಯಿಂದ ಇದನ್ನು  ಕೇಳಿದರೆ. ಉತ್ತಮ ವಿದ್ಯಾವಂತರಾಗುತ್ತಾರೆ. ವಿನಯಾದ ಗುಣಗಳಿಂದ ಕೂಡಿಕವರಾಗಿರುತ್ತಾರೆ ರೋಗಗ್ರಸ್ಥರು ಇದನ್ನು ಕೇಳುವುದರಿಂದ ರೋಗದಿಂದ ನಿರ್ಮುಕ್ತರಾಗುತ್ತಾ ರೆ. ಏನಾದರೂ ತಪ್ಪುಕೆಲಸ ಅಜ್ಞಾನದಿಂದಲೋ. ದರುಭ್ಯಾಸ, ಸಹವಾಸದೋಷದಿಂದಲೋ ಮಾಡಿದ್ದರೆ ಪಶ್ಚಾತ್ತಾಪದಿಂದ ಇದನ್ನು ಕೇಳಿದರೆ ಸಕಲ ಪಾಪಗಳಿಂದಲೂ ಮುಕ್ತನಾಗಿ ತತ್ವಜ್ಞಾನವನ್ನು ಹೊಂದುತ್ತಾನೆ. ಜ್ಞಾನ, ಭಕ್ತಿ ವಿಷಯ ವಿರಕ್ತಿ ಹಾಗೂ ಮೋಕ್ಷವನ್ನು ಪಡೆಯಬೇಕೆಂದು ಇಚ್ಛೆಯುಳ್ಳವರು ಭಕ್ತಿಯಿಂದ ಕೇಳಿದರೆ ಜ್ಞಾನ ಭಕ್ತ್ಯಾದಿಗಳನ್ನು ಹೊಂದಿ ಮುಕ್ತಿಯನ್ನು ಹೊಂದುತ್ತಾನೆ. ಹಚ್ಚೇಕೆ ಹೇಳಲಿ, ಇದನ್ನು ಹೇಳುವವರು, ಕೇಳುವವರು, ಓದುವವರು, ಸಕಲ ಪಾಪಗಳನ್ನು ಪರಿಹರಿಸಿಕೊಂಡು  ಇಹದಲ್ಲಿ ಸಕಲ ಅಭೀಷ್ಟವನ್ನು ಹೊಂದುವುದರ ಜೊತೆಗೆ ಮುಕ್ತಿಯನ್ನೂ ಹೊಂದುತ್ತಾರೆ. ಮದುವೆ ಮಾಡುವಂತೆ ಇದನ್ನು ಮಾಡಬೇಕು. ಜನರಿಗೆಲ್ಲರಿಗೂ ಹೇಳಿಕಳುಹಿಸಬೇಕು. ಮಂಟಪವನ್ನು  ಮಾಡಿ ಅದರಲ್ಲಿ ಭಾಗವತ ಪುಸ್ತಕವನ್ನು ಇಟ್ಟು ಪೂಜಾಮಾಡಿ ಸಪ್ತಾಹವನ್ನು ಹೇಳಬೇಕು. ವಿಷ್ಣುಭಕ್ತನಾದವನು ಭಾಗವತ ಸಪ್ತಾಹವನ್ನು ಹೇಳಬೇಕು. ಅವನು ಸಪ್ತಾಹಕ್ಕಿಂತ ಪೂರ್ವದಿವಸದಲ್ಲಿ ಕ್ಷೌರ ಮಾಡಿಕೊಳ್ಳಬೇಕು. ಸೂರ್ಯೋದಯವನ್ನು ಆರಂಭಿಸಿ ನಾಲ್ಕೂವರೆ ಗಂಟೆಯವರೆಗೆ ಹೇಳಬೇಕು. ಮಧ್ಯದಲ್ಲಿ ಎರಡು ಘಳಿಗೆ ಭಾಗವತವನ್ನು ನಿಲ್ಲಿಸಬೇಕು. ನಾಲ್ಕೂವರೆ ಗಂಟೆಯಾದಮೇಲೆಯೇ ಆಹಾರವನ್ನು ಸ್ವೀಕರಿಸಬೇಕು. ಆಹಾ

ರದಲ್ಲಿ ಬೇಳೆಗಳನ್ನೂ ಜೇನುತುಪ್ಪವನ್ನೂ ಸೇರಿಸಬಾರದು. ಉಪವಾಸದಿಂದ ಮಾಡ ಬಹುದು. ಅಥವಾ ಹಾಲು ಕುಡಿದೋ, ತುಪ್ಪವನ್ನು ಕುಡಿದೋ ಮಾಡಬಹುದು. ಆದರೆ ಕಥಾವಿಘ್ನವು ಬಾರದಂತೆ ನೋಡಿಕೊಳ್ಳಬೇಕು. ಹವಿಷ್ಯಾನ್ನ ಭೋಜನ ಮಾಡಿಯೂ ಸಪ್ತಾಹವನ್ನು ಮಾಡಬಹುದು. ಭಾಗವತ ಸಪ್ತಾಹದ ಮಹಿಮೆಯನ್ನು ಹೀಗೆ ಹೇಳುತ್ತಾರೆ.

ಒಂದು ಸಮಯದಲ್ಲಿ ನಾರದರು ಭೂಮಿಯಲ್ಲಿ ಸಂಚರಿಸುತ್ತಾ ಜನರು ಮಾಡುತ್ತಿದ್ದ ನಾನಾಪಾಪಗಳನ್ನು ನೋಡುತ್ತಾ ಯಮುನಾ ತೀರಕ್ಕೆ ಹೋದರು. ಅಲ್ಲಿ ಒಬ್ಬ ಯುವ ತಿಯು ಅಳುತ್ತಾ ಕೂತಿದ್ದಳು. ಅವಳ ಎದುರಲ್ಲಿ ಇಬ್ಬರು ವೃದ್ದರು ಧೀರ್ಘಶ್ವಾಸವನ್ನು ಬಿಡುತ್ತಾ ಮಲಗಿದ್ದರು. ಆ ಸ್ತ್ರೀಯು ಅವರನ್ನು ಶುಶ್ರೂಷೆಮಾಡುತ್ತಾ ಎಬ್ಬಿಸುತ್ತಾ ಇದ್ದಳು. ''ಯಾರು ರಕ್ಷಿಸುವರು'' ಎಂದು ಹತ್ತು ದಿಕ್ಕುಗಳನ್ನು ನೋಡುತ್ತಿದ್ದಳು. ಆ ಸ್ತ್ರೀಗೆ ಅನೇಕ ಸ್ತ್ರೀಯರು ಬೀಸುತ್ತಾ ಸಮಾಧಾನವನ್ನು ಹೇಳುತ್ತಾ ಇದ್ದರು. ನಾರದರು ಈದೃಷ್ಯವನ್ನು ದೂರದಲ್ಲಿ ನೋಡಿ ಹತ್ತಿರಕ್ಕೆ ಹೋದರು ಅವರನ್ನು ನೋಡಿ ಆ ಸ್ತ್ರೀಯು ಎದ್ದುನಿಂತು ಪರವಶಳಾಗಿ 'ಸಜ್ಜನರೇ ! ಒಂದು ಕ್ಷಣನಿಲ್ಲಿರಿ. ನನ್ನ ಚಿಂತೆ ಯನ್ನು ಪರಿಹಾರ ಮಾಡಿರಿ. ನಿಮ್ಮ ವಾಕ್ಯದಿಂದ ನನ್ನ ದುಃಖ ಶಾಂತಿಯಾಗುವುದು'' ಎಂದು ಹೇಳಿದಳು. ಅದನ್ನು ಕೇಳಿ ನಾರದರು ''ನೀನು ಯಾರು? ಇವರು ಮಲಗಿರು ವವರು ಯಾರು? ಈ ಸ್ತ್ರೀಯರು ಯಾರು'' ಎಂದು ಕೇಳಿದರು. ಅದಕ್ಕೆ ಆ ಸ್ತ್ರೀಯು ''ನಾನು ಭಕ್ತಿಯೆಂದು ಹೆಸರುಳ್ಳವಳು. ಇವರು ನನ್ನ ಮಕ್ಕಳು ಜ್ಞಾನ ವೈರಾಗ್ಯಗಳು ಕಾಲಯೋಗದಿಂದ ಜೀರ್ಣರಾಗಿರುವರು. ಇವರೆಲ್ಲರೂ ಗಂಗಾದಿ ತೀರ್ಥಾಭಿ ಮಾನಿ ದೇವತೆಗಳು. ನಾನು ಘೋರವಾದ ಕಲಿಯಿಂದ, ಮಕ್ಕಳಿಂದ ಕೂಡಿ ಕೊಂಡು ಮುದುಕಿಯಾದೆನು. ಈ ವೃಂದಾವನಕ್ಕೆ ಬಂದು ಯುವತಿಯಾದೆನು. ನನ್ನ ಮಕ್ಕಳು





ಮಾತ್ರ ವೃದ್ಧರಾಗಿಯೇ ಇರುವರು. ಲೋಕದಲ್ಲಿ ತಾಯಿಯು ಮುದುಕಿಯಾಗಿ ಮಕ್ಕಳು ಯುವಕರಾಗಿ ಇರುವುದು ಸಹಜವು . ತಾಯಿಯಾದ ನಾನು ಯುವತಿ ಯಾಗಿ ಇದ್ದುಕೊಂಡು ಮಕ್ಕಳು ಮುದುಕರಾಗಿರುವುದು ನನ್ನ ದುಃಖಕ್ಕೆ ಕಾರಣವಾ ಗಿದೆ. ಇದಕ್ಕೆ ಕಾರಣವೇನೆಂದು ನೀವೇ ಹೇಳಬೇಕು'' ಎಂದಳು.

ಅದಕ್ಕೆ ನಾರದರು ''ನಾನು ಜ್ಞಾನದೃಷ್ಟಿಯಿಂದ ಎಲ್ಲವನ್ನೂ ತಿಳಿದು ಹೇಳು ತ್ತೇನೆ'' ಎಂದು ಹೇಳಿ ಒಂದು ಕ್ಷಣದಲ್ಲಿಯೇ ತಿಳಿದು ಹೇಳಿದರು-'' ಇದು ಭಯಂಕ ರವಾದ ಕಲಿಯುಗವು. ಆದರಿಂದ ಸದಾಚಾರ, ತಪಸ್ಸು, ಇತ್ಯಾದಿಗಳೆಲ್ಲವೂ ನಷ್ಟವಾ ಗಿದೆ. ಆದುದರಿಂದ ನಿನ್ನನ್ನೂ ನಿನ್ನ ಮಕ್ಕಳನ್ನೂ ಈಗ ಒಬ್ಬರೂ ನೋಡುವವರೇ ಇಲ್ಲ. ಆದರಿಂದ ನಿಮಗೆ ಮುದಿತನವು ಬಂದಿತು, ಈ ವೃಂದಾವನಕ್ಕೆ ಬಂದಾಗ ವೃಂದಾವ ನದ ಸಂಬಂದದಿಂದ ನಿನಗೆ ತಾರುಣ್ಯವು ಉಂಟಾಯಿತು. ನಿನ್ನ ಮಕ್ಕಳನ್ನು ಮಾತ್ರ ಒಬ್ಬರೂ ಸ್ವೀಕರಿಸುವವರು ಇಲ್ಲವಾದ ಕಾರಣ ಮುದುಕರಾಗಿಯೇ ಇರುವರು'' ಎಂದರು. ಅದಕ್ಕೆ ಭಕ್ತಿಯು ''ನನ್ನ ಮಕ್ಕಳನ್ನು ಎಬ್ಬಿಸಿರಿ'' ಎಂದಳು. ನಾರದರು ಕಿವಿಯ ಹತ್ತಿರ ಬಾಯಿಯನ್ನು ಇಟ್ಟು ''ಜ್ಞಾನ! ವೈರಾಗ್ಯ!'' ಎಂದು ಕೂಗಿದರು. ವೇದ ವೇದಾಂತ ಗೀತೆಗಳನ್ನು ಹೇಳಿದರು. ಆಗ ಅವರು ಬಹುಕಷ್ಟದಿಂದ ಎದ್ದು ಕಣ್ಣು ತರೆದು ನೋಡದೆ, ಆಕಳಿಕೆಯನ್ನು ಮಾಡುತ್ತಾ ಪುನಃ ಮಲಗಲಿಕ್ಕೆ ಉದ್ಯುಕ್ತರಾದರು. ಅವರನ್ನು ನೋಡಿ ಏನು ಮಾಡಲಿ ಎಂದು ಯೋಚನೆ ಮಾಡುತ್ತಾ ಭಗವಂತನನ್ನು ಸ್ಮರಿಸಿದರು. ಆಗ ''ಋಷಿಯೇ! ಖೇದವನ್ನು ಹೊಂದದಿರು. ನಿನ್ನ ಉದ್ಯೋಗವು ಸಫ ಲವಾಗುವುದು. ಇದಕ್ಕಾಗಿ ಒಂದು ಸತ್ಕರ್ಮವನ್ನು ಮಾಡು. ಯಾವ ಸತ್ಕರ್ಮವನ್ನು ಮಾಡಬೇಕೆಂಬುದನ್ನು ಸಜ್ಜನರು ತಿಳಿಸುತ್ತಾರೆ.'' ಈ ಪ್ರಕಾರವಾಗಿ ಆಕಾಶವಾಣಿ ಯನ್ನು ಎಲ್ಲರೂ ಕೇಳಿದರು. ನಾರದರು ಆಶ್ಚರ್ಯಪಟ್ಟರು. ''ಅಶರೀರವಾಣಿಯೂ

ರಹಸ್ಯವಾಗಿಯೇ ಹೇಳಿತಲ್ಲಾ! ಯಾರು ಸಜ್ಜನರು. ಏನು ಸಾಧನವನ್ನು ಹೇಳುತ್ತಾರೆ.
ಒಂದೂ ತಿಳಿಯಲಿಲ್ಲವಲ್ಲಾ'' ಎಂದು ಹೇಳಿಕೊಂಡು ಜನರ ಹತ್ತಿರ ಕೇಳಿದರು. ಜನರೆ
ಲ್ಲರೂ ಮೌನವನ್ನು ತಾಳದು, ಕೆಲವರು ಓಡಿಹೋದರು.ಕೊನೆಗೆ ನಾರದರು ಬದರಿ
ಕಾಶ್ರಮಕ್ಕೆ ಹೋದರು. ಅಲ್ಲಿ ಪ್ರಕಾಶಮಾನರಾದ ಸನಕಾದಿ ಮುನೀಶ್ವರರನ್ನು ನೋಡಿ
ದರು.ಅವರನ್ನು ಸ್ತೋತ್ರಮಾಡಿ ನಡೆದ ವಿಷಯವೆಲ್ಲವನ್ನೂ ಹೇಳಿದರು. ಅದನ್ನು
ಕೇಳಿ ಸನಕಾದಿಗಳು ನಾರದರೊಡನೆ ''ಅದಕ್ಕೆ ಭಯಪಡುವುದು ಬೇಡ ಭಾಗವತ
ಸಪ್ತಾಹದಿಂದ ಜ್ಞಾನ ಭಕ್ತಿವೈರಾಗ್ಯಗಳ ಅಭಿವೃದ್ದಿಯಾಗುವುದು'' ಎಂದು ಹೇಳಿದರು.
ಗಂಗಾತೀರದಲಿ ಆನಂದ ತಟವೆಂಬ ಸ್ಥಳದಲ್ಲಿ ಭಾಗವತ ಸಪ್ತಾಹವನ್ನು ಹೇಳುವು
ದೆಂದು ನಿಶ್ಚಯಮಾಡಿದರು. ಅದನ್ನು ಕೇಳಿ ಎಲ್ಲಾ ಋಷಿಗಳೂ ಭಾಗವತ ಸಪ್ತಾಹ
ವನ್ನು ಕೇಳಲಿಕ್ಕೆ ಬಂದರು. ನಾರದರು ಶ್ರವಣಮಾಡುವವರಾದರು. ಸನಕಾದಿಗಳೇ
ಭಾಗವತವನ್ನು ಹೇಳುವವರಾದರ. ಮೊದಲು ಭಾಗವತವನ್ನೂ ಭಾಗವತ ಸಪ್ತಾಹ
ವನ್ನೂ ವಿಶೇಷವಾಗಿ ಪ್ರಶಂಸಿಸಿದರು. ಆಮೇಲೆ ಭಾಗವತಸಪ್ತಾಹದ ಮಹಿಮೆಯನ್ನು
ಹೇಳಲಿಕ್ಕೆ ಆರಂಭಿಸಿದರು.

ಪೂರ್ವದಲ್ಲಿ ತುಂಗಭದ್ರಾತೀರದಲ್ಲಿ ಒಂದು ಶ್ರೇಷ್ಠವಾದ ಪಟ್ಟಣವಿದ್ದಿತು.
ಅಲ್ಲಿ ವೇದಶಾಸ್ತ್ರಪಂಡಿತನಾದ ಆತ್ಮದೇವ ಎಂದು ಹೆಸರುಳ್ಳ ಒಬ್ಬ ಬ್ರಾಹ್ಮಣನಿದ್ದನು.
ಅವನು ಒಳ್ಳೇ ಹಣವಂತನಾಗಿದ್ದನು. ಅವನಿಗೆ ದುಂಧುಲಿ ಎಂದು ಹೆಸರುಳ್ಳ ಹೆಂಡತಿ
ಯಿದ್ದಳು. ಅವಳು ಯಾವಾಗಲೂ ಜಗಳವಾಡುವವಳಾಗಿದ್ದಳು. ತನ್ನ ಹಟವನ್ನೇ
ಸಾಧಿಸುತ್ತಿದ್ದಳು. ಆ ದಂಪತಿಗಳು ಸುಖವಾಗಿ ಇದ್ದರು. ಅವರಿಗೆ ಮಕ್ಕಳಾಗಲಿಲ್ಲ
ಆಮೇಲೆ ಮಕ್ಕಳಾಗಬೇಕೆಂದು ಅನೇಕ ಧರ್ಮಗಳನ್ನೂ ದಾನಗಳನ್ನೂ ಮಾಡಿದರು.
ಅರ್ಧಹಣವನ್ನು ಧರ್ಮಕ್ಕೆ ಉಪಯೋಗಿಸಿದರು.





ಒಂದು ದಿನದಲ್ಲಿ ಆತ್ಮದೇವನು ಕಾಡಿಗೆ ಹೋದನು. ಮಧ್ಯಾಹ್ನಕ್ಕೆ ನೀರಡಿಕೆ
ಯಾಗಿ ಒಂದು ಸರೋವರವನ್ನು ಕಂಡು ಅಲ್ಲಿ ನೀರನ್ನು ಕುಡಿದನು. ಅಲ್ಲಿಯೇ
ಕೂತುಕೊಂಡನು. ಒಂದು ಮುಹೂರ್ತವಾದ ಮೇಲೆ ಅಲ್ಲಿಗೆ ಒಬ್ಬ ಯತಿಗಳು
ನೀರನ್ನು ಕುಡಿಯಲಿಕ್ಕೆ ಬಂದರು. ನೀರನ್ನು ಕುಡಿದಮೇಲೆ ಆತ್ಮದೇವನು ಆ ಯತಿಗಳ
ಬಳಿಗೆ ಬಂದು ಕಾಲಿಗೆ ಬಿದ್ದು ಅಳುತ್ತಾ ನಿಂತುಕೊಂಡನು. ಅದನ್ನು ನೋಡಿ ಯತಿ
ಗಳು '' ಯಾಕೆ ಅಳುತ್ತಿರುವಿ? ನಿನ್ನ ದುಃಖದ ಕಾರಣವನ್ನು ತಿಳಿಸು'' ಎಂದರು.
ಅದಕ್ಕೆ ಆತ್ಮದೇವನು 'ನನ್ನ ದುಖವನ್ನು ಏನೆಂದು ಹೇಳಲಿ. ನಾನು ಜನ್ಮಾಂತರದಲ್ಲಿ
ಮಹಾ ಪಾಪವನ್ನು ಮಾಡಿರುವೆನು. ಅದರಿಂದ ನನಗೆ ಮಕ್ಕಳೇಇಲ್ಲ. ನಾನು ಮನೆ
ಯಲ್ಲಿ ಒಂದು ದನವನ್ನು ಸಕಿದರೆ ಅದೂ ಕರುವನ್ನು ಹಾಕುವುದಲ್ಲಿ, ಒಂದು ಮರ
ವನ್ನು ಬೆಳೆಸಿದರೂ ಅದು ಫಲವನ್ನು ಕೊಡಲಾರದು, ಮಕ್ಕಳಾಗದೆ ನಾನು ಬದುಕಿರು
ವುದೇ ವ್ಯರ್ಥ'' ಎಂದು ಹೇಳಿ ಗಟ್ಟಿಯಾಗಿ ಅಳುವವನಾದನು. ಆಗ ಯತಿಗಳು ಆತ್ಮ
ದೇವನ ಹಣೆಯ ಅಕ್ಷರಗಳನ್ನು ನೋಡಿ 'ಬ್ರಾಹ್ಮಣ! ವಿವೇಕವನ್ನು ತಂದುಕೊ.
ಸಂಸಾರ ವಾಸನೆಯನ್ನು ಬಿಡು. ನಿನ್ನ ಹಣೆಯಲ್ಲಿ ಏಳು ಜನ್ಮಗಳಲ್ಲಿ ಮಕ್ಕಳಾಗುವಂತೆ
ಇಲ್ಲ'' ಎಂದರು. ಆತ್ಮದೇವನು ''ನನಗೆ ಮಕ್ಕಳಾಗುವಂತೆ ಅನುಗ್ರಹಿಸದೆ ಇದ್ದರೆ
ಇಲ್ಲಿಯೇ ಪ್ರಾಣಬಿಡುವೆನೆಂದನು. ಬ್ರಾಹ್ಮಣನ ಆಗ್ರಹವನ್ನು ನೋಡಿ ಯತಿಗಳು- ''
ಬ್ರಾಹ್ಮಣ! ನೀನು ಸುಮ್ಮನೆ ಹಠವನ್ನು ಮಾಡುತ್ತಿರುವಿ. ಪೂರ್ವದಲ್ಲಿ ಚಿತ್ರಕೇತುರಾ
ಜನು ನಿನ್ನ ಹಾಗೆಯೇ ಹಠವನ್ನು ಮಾಡಿ ದುಖವನ್ನು ಹೊಂದಿದನು. ಹಾಗೆಯೇ
ನಿನಗೂ ಆಗುವುದು'' ಎಂದು ಹೇಳಿ ಒಂದು ಹಣ್ಣನ್ನು ಕೊಟ್ಟು''ಇದನ್ನು ನಿನ್ನ ಹೆಂಡ
ತಿಗೆ ಕೊಡು. ಅವಳು ಇದನ್ನು ತಿನ್ನಲಿ. ಒಂದು ವರ್ಷ ಅವಳು ನಿಯಮದಿಂದ ಇರಲಿ.
ಆಗ ಒಳ್ಳೇ ಮನು ಹುಟ್ಟುವನು'' ಎಂದು ಹೇಳಿ ಹೊರಟು ಹೋದರು. ಆತ್ಮದೇ

ವನೂ ತನ್ನ  ಮನೆಗೆ ಹೋದನು. ಹೆಂಡತಿಯ ಕೈಯಲ್ಲಿ ಹಣ್ಣನ್ನು ಕೊಟ್ಟು ವಿಷಯ
ವನ್ನು ಹೇಳಿ ಕಾರ್ಯಾಂತರಕ್ಕಾಗಿ ಹೋದನು.

ದುಂಧುಲಿಯು ತನ್ನ ಸಖಿಯೊಡನೆ- ''ನೋಡೇ ! ಈ ಹಣ್ಣನ್ನು ತಿಂದರೆ
ಮಕ್ಕಳಾಗುವುದಂತೆ. ನನಗೆ ಗರ್ಭವೇನು ಬೇಕಾಗಿದೆ? ಗರ್ಭವುಂಟಾದರೆ ಸರಿ
ಯಾಗಿ ಕೆಲಸ ಮಾಡಲಿಕ್ಕೆ ಆಗುವುದೋ? ಸರಿಯಾಗ ಪ್ರಸವವಾದರೆ ಆಯಿತು. ಇಲ್ಲ
ದಿದ್ದರೆ ಪ್ರಾಣಹೋಗುವ ಸಂಭವವಸ್ಟೆ! ಮಕ್ಕಳಾದರೆ ರಕ್ಷಣೆ ಮಾಡಲಿಕ್ಕೆ ಎಷ್ಟು ಕಷ್ಟ
ವಿದೆ? ಆದುದರಿಂದ ಯಾರು ಹಡೆಯದೆ ಇರುವವಳೋ ಅಥವಾ ವಿದವಾ
ಸ್ತ್ರೀಯೋ ಬಹಳ ಪುಣ್ಯಮಾಡಿದವಳು'' ಎಂದು ಹೇಳಿಕೊಂಡಳು. ಹೀಗೆ ಕುಯುಕ್ತಿ
ಯಿಂದ ಅವಳು ಹಣ್ಣನ್ನು ತಿನ್ನಲೇ ಇಲ್ಲ. ಗಂಡನು ಬಂದು ಕೇಳಿದಾಗ ತಿಂದೆನೆಂದು
ಸುಳ್ಳು ಹೇಳಿದಳು. ಆಮೇಲೆ ಒಂದು ದಿನ ತನ್ನ ತಂಗಿಯು ಮನೆಗೆ ಬಂದಿರಲು ಅವ
ಳೊಡನೆ ತನ್ನ ಯೋಚನೆಯೆಲ್ಲವನ್ನು ಹೇಳಿಕೊಂಡಳು. ಅದಕ್ಕೆ ಅವಳು ''ಹಾಗಾದರೆ
ಈಗ ನಾನು ಗರ್ಭಿಣಿಯಾಗಿರುವೆನು. ನೀನು ಗಂಡನೊಡನೆ ''ನಾನು ಗರ್ಭಿಣಿ
ಯೆಂದು  ಹೇಳಿಕೊಂಡು ಇರು. ನನ್ನ ಗಂಡನೊಡನೆ ಸ್ವಲ್ಪ ಹಣವನ್ನು ಕೊಟ್ಟಿಡು.
ಹಾಗೆ ಮಾಡಿದರೆ ಅವರು ನಾನು ಹಡೆದ ಕೂಡಲೆ ಮಗುವನ್ನು ನಿಗಗೆ ತಂದುಕೊಡು
ವರು. ಆಮೇಲೆ ನೀನು ಹಡೆದ ವಿಷಯವನ್ನು  ಗಂಡನ ಹತ್ತಿರ ಹೇಳಿ ತಿಳಿಸು.
ಆಮೇಲೆ ನನ್ನ ಮಗುವು ಸತ್ತುಹೋಯಿತು ಎಂದು ನಾನು ಪ್ರಸಿದ್ದಿ ಮಾಡುತ್ತೇನೆ.
ಆಮೇಲೆ ನಾನು ಬಂದು ಇದ್ದು ಮಗುವನ್ನು ರಕ್ಷಣೆ ಮಾಡುತ್ತೇನೆ. ಆದರೂ ಪರೀಕ್ಷೆ
ಗಾಗಿ ಹಣ್ಣನ್ನು ನಿನ್ನ ಮನೆಯಲ್ಲಿ ಇರುವ ದನಕ್ಕೆ ಹಾಕು'' ಎಂದಳು. ಹಾಗೆಯೇ
ದುಂಧುಲಿಯು ಮಾಡಿದಳು. ತರುವಾಯ ತಂಗಿಯ ಗಂಡನು ಮೆಲ್ಲನೆ ಮಗುವನ್ನು
ತಂದುಕೊಟ್ಟನು. ದುಂಧುಲಿಯು ಗಂಡನೊಡನೆ ಸುಖವಾಗಿ ಹಡೆದೆನೆಂದಳು. ಆತ್ಮ





ದೇವನಿಗೆ ಮಗುವು ಹುಟ್ಟಿತೆಂದು ಎಲ್ಲರಿಗೂ ಸಂತೋಷವಾಗಯಿತು. ಆತ್ಮದೇವನು
ಬ್ರಾಹ್ಮಣರಿಗೆ ಬೇಕಾದ ದಾನಗಳನ್ನು ಕೊಟ್ಟನು. ಆಮೇಲೆ ದುಂಧುಲಿಯು ''ನನ್ನ ಸ್ತನ
ದಲ್ಲಿ ಹಾಲೇ ಇಲ್ಲ. ಇನ್ನೊಬ್ಬರ ಹಾಲಿನಿಂದ ಮಗುವನ್ನು ಹೇಗೆ ಬೆಳೆಸಲಿ? ನನ್ನ
ತಂಗಿಯ ಮಗುವು ಮೃತವಾಗಿದೆ. ಆದರಿಂದ ಅವಳೇ ಬಂದು ಮಗುವಿಗೆ ಸ್ತನವನ್ನು
ಕೊಡಲಿ'' ಎಂದಳು. ಆತ್ಮದೇವನು ಸರಿಯೆಂದನು. ಮಗುವಿಗೆ ಧುಂಧುಕಾರಿ ಎಂದು
ನಾಮಕರಣ ಮಾಡಿದನು. ಧುಂಧುಕಾರಿಗೆ ಮೂರುತಿಂಗಳಾದಾಗ ಆತ್ಮದೇವನ
ಮನೆಯ ಧನವು ಹಡೆಯಿತು. ಅದು ಸುಂದರವಾದ ಗಂಡು ಕೂಸನ್ನು ಹಡೆಯಿತು.
ಆ ಮಗುವಿಗೆ ಕಿವಿಯು ಮಾತ್ರ ದನದ ಕಿವಿಯಂತೆ ಇದ್ದಿತು. ಆ ಮಗುವಿಗೆ ಆತ್ಮದೇ
ವನು ''ಗೋಕರ್ಣ'' ಎಂದು ನಾಮಕರಣ ಮಾಡಿದನು. ದನವು ಮಗುವನ್ನು ಹಡೆ
ದದ್ದನ್ನು ಕೇಳಿ ಎಲ್ಲರೂ ಆಶ್ಚರ್ಯಪಟ್ಟರು. ಆತ್ಮದೇವನನ್ನು ಎಲ್ಲರೂ ಸ್ತುತಿಸಿದರು.
ನಡೆದ ರಹಸ್ಯವು ಒಬ್ಬರಿಗೂ ತಿಳಿಯಲಿಲ್ಲ. ಕ್ರಮದಿಂದ ಇಬ್ಬರು ಮಕ್ಕಳು ಬೆಳೆಯುತ್ತಾ
ಬಂದರು -ಗೋಕರ್ಣನು ಒಳ್ಳೇ ಪಂಡಿತನಾದನು. ಧುಂಧುಕಾರಿಯು ಮಾತ್ರ ಪರ
ಮನೀಚನಾದನು, ಸ್ನಾನ, ಶೌಚಾಚಾರರಹಿತನಾಗಿ ನಿಷಿದ್ದ ವಸ್ತುವನ್ನು  ತಿನ್ನುತ್ತಾ
ಇದ್ದನು. ಕಳ್ಳತನವನ್ನು  ಮಾಡುತ್ತಿದ್ದನು. ಭಾವಿಯ ಹತ್ತಿರ ಆಡುತಿದ್ದ ಮಕ್ಕಳನ್ನು
ನೋಡಿ ಅವರನ್ನು ಎತ್ತಿ ಭಾವಿಗೆ ಹಾಕುತ್ತಿದ್ದನು. ವೇಶ್ಯಾಗಮವನ್ನು ಮಾಡುತ್ತಿದ್ದನು.
ಹೀಗೆ ಬಹು ಹಣವನ್ನು ನಾಳಮಾಡಿದನು. ಒಂದು ದಿನ ಅವನು ತಂದೆಯಾಯಿಗಳಿಗೆ
ಚೆನ್ನಾಗಿ ಬಡಿದು ಮನಯ ಪಾತ್ರೆಯೆಲ್ಲವನ್ನು ಎತ್ತಿಕೊಂಡು ಹೋದನು. ಆತ್ಮದೇ
ವನು ಗಟ್ಟಿಯಾಗಿ ಅಳುವವನಾದನು, ಮಕ್ಕಳು ಇಲ್ಲದವರೇ ಬಹು ಪುಣ್ಯಮಾಡಿದ
ವರು, ನಾನು ಏನು ಮಾಡಲಿ ? ಎಲ್ಲಿಗೆ ಹೋಗಲಿ? ನನ್ನ ದುಃಖವನ್ನು ಯಾರು ಪರಿ
ಹರಿಸುವರು? ನಾನು ಪ್ರಾಣವನ್ನಾದರೂ ಬಿಡುವೆನು'' ಎಂದು ಹೇಳಿಕೊಂಡನು.
ಆಗ ಗೋಕರ್ಣನು ಬಂದು ಸಮಾಧಾನಪಡಿಸಿ ಕಾಡಿಗೆ ಹೋಗಿ ಭಾಗವತ ದಶಮ

ಸ್ಕಂಧವನ್ನು ಪಾರಾಯಣಮಾಡು ಎಂದನು. ಹಾಗೆಯೇ ಆಗಲಿ ಎಂದ ಆತ್ಮದೇವನು
ಮನೆಯನ್ನು ಬಿಟ್ಟು ಕಾಡಿಗೆ ಹೋಗಿ ಅಲ್ಲಿ ದಶಮಸ್ಕಂಧವನ್ನು ಪಾರಾಯಣ
ಮಾಡುತ್ತಾ ಇದ್ದು ದೇಹವನ್ನು ಪರಿತ್ಯಜಿಸಿ ಸದ್ಗತಿಯನ್ನು ಹೊಂದಿದನು.

ತಂದೆಯು ಹೋದಮೇಲೆ ಒಂದು ದಿನ ಧುಂಧುಕಾರಿಯು ತಾಯಿಯೊ
ಡನೆ ''ಹಣವೆಲ್ಲಿದೆ? ಹೇಳು, ಇಲ್ಲದಿದ್ದರೆ ನಿನ್ನನ್ನು ಕೊಂದುಹಾಕುತ್ತೇನೆ'' ಎಂದು
ಹೇಳಿದನು. ಅದರಿಂದ ಬೆದರಿದವಳಾಗಿ ಅವಳು ರಾತ್ರಿಯಲ್ಲಿ ಬಾವಿಗೆ ಬಿದ್ದು ಪ್ರಾಣ
ವನ್ನು ಕಳೆದುಕೊಂಡಳು. ಗೋಕರ್ಣನು ತೀರ್ಥಯಾತ್ರೆಗೆ ಹೊರಟು ಹೋದನು.
ಧುಂಧುಕಾರಿಯು ಐದು ವೇಶ್ಯೆಯರನ್ನು ಮನೆಯಲ್ಲಿ ಇಟ್ಟುಕೊಂಡು ಅವರನ್ನು
ಪೋಷಿಸುತ್ತಾ ಇದ್ದನು. ಒಂದು ದಿನ ಆ ವೇಶ್ಯೆಯರು ನಮಗೆ ಆಭರಣಗಳು ಬೇಕು
ಎಂದು ಕೇಳಿದರು. ಅದಕ್ಕಾಗಿ ಧುಂಧುಕಾರಿಯು ಕಾಮಾಂಧನಾಗಿ ಮರಣಭಯರಹಿ
ತನಾಗಿ ಹೋಗಿ ಬಹು ಆಭರಣಗಳನ್ನು ಅಪಹರಿಸಿಕೊಂಡು ಹಾಗೆಯೇ ಸೀರೆಗಳನ್ನು
ಹಿಡಿದುಕೊಂಡು ಬಂದು ಕೊಟ್ಟನು. ಆ ವೇಶ್ಯೆಯರು ಅವನು ತಂದಿದ್ದ ಬಹು ಆಭರ
ಣಗಳನ್ನು ನೋಡಿ ಇವನು ನಿತ್ಯವೂ ಎಲ್ಲಿಂದಲೋ ಕದ್ದುಕೊಂಡು ಬರುತ್ತಿರುವನು.
ಒಂದು ದಿನ ರಾಜನು ಇವನನ್ನು ಹಿಡಿದು ಹಣವನ್ನು ಎಲ್ಲವನ್ನೂ ಅಪಹರಿಸಿ ಇವ
ನನ್ನು ಕೊಲ್ಲಿಸುವನು. ಹಣವನ್ನು ಉಳಿಸಿಕೊಳ್ಳಲಿಕ್ಕೆ ನಾವೇ ಯಾಕೆ ಇವನನ್ನು ಕೊಲ್ಲ
ಬಾರದು ಎಂದು ಮಾತಾಡಿಕೊಂಡರು. ಆಮೇಲೆ ಈ ರೀತಿಯಾಗಿ ನಿಶ್ಚಯಮಾಡಿದ
ವರಾಗಿ ಅವರು ಧುಂಧುಕಾರಿಯು ಮಲಗಿರುವಾಗ ಅವನ ಕುತ್ತಿಗೆಗೆ ಹಗ್ಗವನ್ನು ಹಾಕಿ
ಸೆಳೆಯಲಿಕ್ಕೆ ಆರಂಭಿಸಿದರು. ಸಾಮಾನ್ಯಕ್ಕೆ ಆ ಪಾಪಿಯ ಪ್ರಾಣವು ಹೋಗಲೇ ಇಲ್ಲ.
ಆಮೇಲೆ ಅವನ ಮುಖದ ಮೇಲೆ ಬೆಂಕಿಯ ಕೆಂಡಗಳನ್ನು ಸುರಿದರು. ಇದರಿಂದ
ಅವನು ಕಷ್ಟದಿಂದ ಪ್ರಾಣವನ್ನು ಬಿಟ್ಟನು. ವೇಶ್ಯೆಯರು ಆಮೇಲೆ ಅವನ ದೇಹವನ್ನು





ಒಂದು ತಗ್ಗಿನಲ್ಲಿ ಹಾಕಿ ಮುಚ್ಚಿಬಿಟ್ಟರು. ಈ ರಹಸ್ಯವು ಒಬ್ಬರಿಗೂ ತಿಳಿಯಲಿಲ್ಲ.
ಆಮೇಲೆ ಆ ವೇಶ್ಯೆಯರು ಹಣವನ್ನು ಹಿಡಿದುಕೊಂಡು ಎಲ್ಲಿಯೋ ಹೊರಟು
ಹೋದರು. ತರುವಾಯ ಧುಂಧುಕಾರಿಯು ಮಾಡಿದ ಮಹಾ ಪಾಪದಿಂದ ದೊಡ್ಡ
ಪ್ರೇತನಾದನು. ಆಹಾರ ಹೀನನಾಗಿ ಬಹಳ ಶ್ರಮಪಟುತ್ತಿದ್ದನು. ಸ್ವಲ್ಪ ಸಮಯದ
ಮೇಲೆ ತೀರ್ಥಯಾತ್ರೆಯನ್ನು ಮಾಡುತ್ತಿದ್ದ ಗೋಕರ್ಣನಿಗೆ ಧುಂಧುಕಾರಿಯು ಮೃತ
ನಾದ ವಿಷಯವು ತಿಳಿಯಿತು. ಆಗ ಅವನು ಧುಂಧುಕಾರಿಯು ಅನಾಥನೆಂದು
ತಿಳಿದುಕೊಂಡು ಗಯೆಯಲ್ಲಿ ಶ್ರಾದ್ಧವನ್ನು ಮಾಡಿದನು. ಹೀಗೆಯೇ ಸಂಚರ
ಮಾಡುತ್ತಾ ಗೋಕರ್ಣನು ರಾತ್ರಿಯಲ್ಲಿ ಒಬ್ಬರೂ ತಿಳಿಯದಂತೆ ಊರಿಗೆ ಬಂದು
ಮನೆಯ ಅಂಗಳದಲ್ಲಿ ಮಲಗಲಿಕ್ಕೆ ಬಂದನು. ಅಲ್ಲಿ ಆವನು ಮಲಗಿದ್ದನ್ನು ತಿಳಿದು
ಧುಂಧುಕಾರಿಯು ಗೋಕರ್ಣನಿಗೆ ಭಯಂಕರವಾದ ರೂಪದಿಂದ ಕಾಣಿಸಿ
ಕೊಂಡನು. ನೋಡುತ್ತಿರುವಂತೆಯೇ ಮೇಕೆಯಾದನು. ಆಮೇಲೆ ಆನೆಯಾದನು.
ಎಮ್ಮೆಯಾದನು. ಆಮೇಲೆ ಇಂದ್ರನಂತೆ, ಅಗ್ನಿಯಂತೆ ಕಾಣಿಸಿಕೊಂಡನು. ಆಮೇಲೆ
ಮನುಷ್ಯನಂತೆ ಕಾಣಿಸಿಕೊಂಡನು. ಪುನಃ ಮೃಗಗಳಂತೆ ಕಾಣಿಸಿಕೊಂಡನು. ಅದನ್ನು
ನೋಡಿ ಗೋಕರ್ಣನು ಯಾರೋ ದುರ್ಗತಿಯನ್ನು ಹೊಂದಿದವನೆಂದು ತಿಳಿದು ''
ಭಯಂಕರವಾದ ರೂಪವುಳ್ಳ ಈ ದೆಸೆಯನ್ನು ಹೊಂದಿರುವ ನೀನು ಯಾರು?
ಪ್ರೇತನೋ, ಪಿಶಾಚವೋ,ರಾಕ್ಷಸನೋ, ಹೇಳು'' ಎಂದು ಕೇಳಿದನು. ಆಗ ಧುಂಧು
ಕಾರಿಯು ಗಟ್ಟಿಯಾಗಿ ಅಳಲಾರಂಭಸಿದನು. ಮಾತಾಡಲಿಕ್ಕೆ ಆಗುವುದಿಲ್ಲವೆಂದು
ಸಂಜ್ಞೆಯನ್ನು ಮಾಡಿದನು. ಆಗ ಗೋಕರ್ಣನು ಕೈಯಲ್ಲಿ ಒಂದಿಷ್ಟು ನೀರನ್ನು ತೆಗೆದು
ಅವನ ಮುಖದ ಮೇಲೆ ಎರಚಿದನು. ಆಗ ಧುಂಧುಕಾರಿಯು ''ನಾನು ನಿನ್ನ ಸಹೋ
ದರನಾದ ಧುಂಧುಕಾರಿಯು. ನನ್ನ ದೋಷದಿಂದಲೇ ಬ್ರಾಹ್ಮಣ್ಯವನ್ನು ಕಳೆಕೊಂಡಿರು
ವೆನು ನಾನು ಮಾಡಿದ ಪಾಪಕ್ಕೆ ಸಂಖ್ಯೆಯೇ ಇಲ್ಲ. ಅದರಿಂದ ನಾನು ಪ್ರೇತನಾಗಿರು

ವೆನು. ತುಂಬಾ ಕಷ್ಟವನ್ನು ಅನುಭವಿಸುತ್ತಿರುವೆನು! ನನ್ನನ್ನು ಈ ಕಷ್ಟದಿಂದ ಬಿಡಿಸು'' ಎಂದನು. ಆದಕ್ಕೆ ಗೋಕರ್ಣನು ''ನಿನಗಾಗಿ ನಾನು ಗಯೆಯಲ್ಲಿ ಪಿಂಡವನ್ನು ಹಾಕಿರುವೆನಲ್ಲಾ! ಆದರೂ ನಿನಗೆ  ಯಾಕೆ ಈ ದುರ್ಗತಿಯು ಉಂಟಾಯಿತು? ಗಯಾ ಶ್ರಾದ್ಧಕ್ಕಿಂತ ಬೇರೆ ಉಪಾಯವಿಲ್ಲ. ಆದರಿಂದ ನಾನು ನಿನಗೀಗ ಏನು ಮಾಡಬೇಕು ಹೇಳು'' ಎಂದನು. ಪ್ರೇತವು ''ನಾನು ಮಾಡಿದ ಪಾಪಕ್ಕೆ ನೂರು ಗಯಾ ಶ್ರಾದ್ಧಗಳಿಂದಲೂ ನನಗೆ ಸದ್ಗತಿಯಾಗಲಾರದು'' ಎಂದಿತು. ''ನೂರು ಗಯಾ ಶ್ರಾದ್ಧಗಳಿಂದಲೂ ನಿನಗೆ ಸದ್ಗತಿಯಾಗದಿದ್ದರೆ ನಿನ್ನ ಈ ದುರ್ಗತಿಯನ್ನು ಬಿಡಿಸುವುದು ಅಶಕ್ಯವಾಗಿ ಕಾಣಿಸುತ್ತದೆ. ಆಗಲಿ ನೀನೀಗ ನಿರ್ಭಯದಿಂದ ನಿನ್ನ ಸ್ಥಾನಕ್ಕೆ ಹೋಗಿ ಇರು. ನಿನಗೆ ಬಿಡುಗಡೆಯಾಗುವಂತೆ ಪ್ರಯತ್ನ ಮಾಡುತ್ತೇನೆ'' ಎಂದು ಗೋಕರ್ಣನು ಹೇಳಲು ಧುಂಧುಕಾರಿಯು ಹೊರಟು ಹೋದನು. ಗೋಕರ್ಣನಿಗೆ ಅದನ್ನೇ ಯೋಚಿಸುತ್ತಾ ನಿದ್ರೆಯೇ ಬರಲಿಲ್ಲ. ಬೆಳಗಾಗಲು ಎಲ್ಲಾ ಜನರು ಗೋಕರ್ಣನನ್ನು ನೋಡಿ ಅಲ್ಲಿಗೆ ಬಂದರು. ಎಲ್ಲರ ಹತ್ತಿರವೂ ಗೋಕರ್ಣನು ಧುಂಧುಕಾರಿಯ ವಿಷಯವನ್ನು ಹೇಳಿದನು. ಯಾರಿಗೂ ಧುಂಧುಕಾರಿಗಾಗಿ ಏನು ಮಾಡಬೇಕೆಂದಿ ತಿಳಿಯಲಿಲ್ಲ. ಎಲ್ಲರೂ ಸೂರ್ಯದೇವರ ಮಾತು ಈ ವಿಷಯದಲ್ಲಿ ಪ್ರಮಾಣವೆಂದರು. ಸೂರ್ಯದೇವರು ಹೇಳಿದಂತಮಾಡು. ಗೋಕರ್ಣನು ತಪಃ ಸಾಮರ್ಥ್ಯದಿಂದ ಸೂರ್ಯದೇವರ ವೇಗವನ್ನು ಸ್ತಂಭನಮಾಡಿದನು. 'ಜಗತ್ತಿಗೆ ಸಾಕ್ಷಿಯಾಗಿರುವವರೇ! ಧುಂಧುಕಾರಿಯ ಪ್ರೇತಜನ್ಮ ನಿವೃತ್ತಿಯ ಉಪಾಯವನ್ನು ಹೇಳಿರಿ. ನಿಮಗೆ ನಮಸ್ಕಾರವು' ಎಂದು ಗೋಕರ್ನನು ಹೇಳಿದನು. ''ಶ್ರೀ ಭಾಗವತಾನ್ಮುಕ್ತಿಃ ಸಪ್ತಾಹವಚನಂಕುರು'' ಭಾಗವತದಿಂದ ಬಿಡುಗಡೆಯಾಗುವುದು, ಬಾಗವತ ಸಪ್ತಾಹವನ್ನು ಮಾಡು ಎಂದು ಸೂರ್ಯದೇವರ ಮಾತು ಎಲ್ಲರ ಕಿವಿಗೂ ಕೇಳಿಸಿತು.





ತರುವಾಯ ಗೋಕರ್ಣನು ಭಾಗವತ ಸಪ್ತಾಹವನ್ನು ಮಾಡುವುದೆಂದು ನಿಶ್ಚಯಿಸಿದನು. ಬಹುಜನರು ಅದನ್ನು ತಿಳಿದು ಸಪ್ತಾಹವನ್ನು ಕೇಳಲಿಕ್ಕೆ ಬಂದರು. ದೊಡ್ಡ ಸಭೆಯು ಸೇರಿತು. ಗೋಕರ್ಣನು ಆಸನದಲ್ಲಿ ಕೂತುಕೊಂಡು ಭಾಗವತವನ್ನು ಹೇಳಲಿಕ್ಕೆ ಆರಂಭಿಸಿದನು. ಆಗ ಆ ಪ್ರೇತವು ಅಲ್ಲಿಗೆ ಬಂದಿತು. ಅದು ಗಾಳಿಯ ರೂಪದಿಂದಿ ಇರುವುದರಿಂದ ಒಂದು ಸ್ಥಳದಲ್ಲಿ ನಿಲ್ಲಲಿಕ್ಕೆ ಅಸಮರ್ಥವಾಗಿ ಅಲ್ಲಿ ಇದ್ದ ಏಳುಗಂಟುಗಳಿಂದಿ ಕೂಡಿದ ಬಿದಿರನ್ನು ನೋಡಿ ಅದರ ಒಳಗೆ ಪ್ರವೇಶ ಮಾಡಿ ಕೇಳುತ್ತಿತ್ತು. ಗೋಕರ್ಣನು ವಿಷ್ಣುಭಕ್ತನಾದ ಒಬ್ಬನನ್ನು ಶ್ರವಣ ಮಾಡುವವನನ್ನಾಗಿ ಮಾಡಿ ಪ್ರಥಮಸ್ಕಂಧವನ್ನು ಆರಂಭಿಸಿ ಸ್ಪಷ್ಟವಾಗಿ ಭಾಗವತವನ್ನು ಹೇಳಿದನು. ಸಾಯಂಕಾಲ ಕಥೆಯು ಮುಗಿದಾಗಿ ಬಿದಿರಿನ ಒಂದು ಗಂಟು ಗಟ್ಟಿಯಾಗಿ ಶಬ್ದಮಾಡಿ ಒಡೆದು ಹೋಯಿತು. ಹೀಗೆಯೇ ಎರಡನೇ ದಿನದಲ್ಲಿ ಎರಡನೇ ಗಂಟು ಒಡಿದು ಹೋಯಿತು. ಹೀಗೆಯೇ ಏಳನೇ ದಿನದಲ್ಲಿ ಏಳನೇ ಗಂಟು ಒಡೆದು ಹೋಯಿತು. ಭಕ್ತಿಯಿಂದ ಭಾಗವತಸಪ್ತಾಹವನ್ನು ಕೇಳಿದ್ದರಿಂದ ಧುಂಧುಕಾರಿಗೆ ಪ್ರೇತಜನ್ಮವು ನಷ್ಟವಾಯಿತು. ದಿವ್ಯರೂಪವುಳ್ಳವನಾಗಿ ಗೋಕರ್ಣನಿಗೆ ನಮಸ್ಕರಿಸಿದನು. ''ಬಂಧೋ! ಕೃಪಿಯಿಂದ ನನ್ನ ಪ್ರೇತಜನ್ಮವನ್ನು ಬಿಡಿಸಿದಿ'' ಎಂದು ಹೇಳಿ ಭಾಗವತ ಪ್ರಶಂಸೆಯನ್ನು ಮಾಡಿದನು. ಅಷ್ಟರಲ್ಲಿ ವಿಮಾನವು ಬಂದಿತು. ವಿಷ್ಣುಭಕ್ತರುಎಲ್ಲರೂ ನೋಡುವಂಥೇ ದಿವ್ಯದೇಹವನ್ನು ಧರಿಸಿದ್ದ ಧುಂಧುಕಾರಿಯನ್ನು ವಿಮಾನದಲ್ಲಿ ಕೂತುಕೊಳ್ಳಿಸಿದರು. ಆಗ ಗೋಕರ್ಣನು ''ಇಲ್ಲಿಯೇ ಅನೇಕರು ಕೇಳುತ್ತಿರುವರಲ್ಲಾ! ಅವರೆಲ್ಲರಗೂ ವಿಮಾನವು ಯಾಕೆ ಬರಲಿಲ್ಲ ? ಏಂದು ಕೇಳಿದನು ಅದಕ್ಕೆ ಅವರು ''ಇವರೆಲ್ಲರೂ ಶ್ರವಣಮಾಡಿದ್ದರಲ್ಲದೆ ಮನನವನ್ನು ಮಾಡಲಿಲ್ಲ. ಧಂಧುಕಾರಿಯು ಏಳು ದಿವಸವೂ ಉಪವಾಸದಿಂದಲೇ ಭಕ್ತಿಯಿಂದ ಕೇಳಿ ಮನನವನ್ನು ಮಾಡಿರುವನು. ಇನ್ನೊಂದು ಸಲ ನೀನು ಭಾಗವತಸಪ್ತಾಹವನ್ನು ಹೇಳು.  ಆಗ ಎಲ್ಲರೂ ಸರಿಯಾಗಿ

ಕೇಳಿ ಮನನವನ್ನು ಮಾಡಲಿ. ಆಗ ಅವರಿಗೂ ವಿಮಾನವು ಬರುವುದು'' ಎಂದು ಹೇಳಿಧುಂಧುಕಾರಿಯನ್ನು ಕರೆದುಕೊಂಡು ಹೋದರು. ಆ ಮೇಲೆ ಗೋಕರ್ಣನು ಶ್ರಾವಣಮಾಸದಲ್ಲಿ ಪುನಃ ಭಾಗವತ ಸಪ್ತಾಹವನ್ನು ಹೇಳಿದನು. ಮೊದಲು ಆಷಾಢ ಮಾಸದಲ್ಲಿ ಹೇಳಿದ್ದನು. ಎರಡನೇ ಸಲ ಹೇಳಿದಾಗ ಪುನಃ  ವಿಮಾವನು ಬಂದು ಭಾವತಸಪ್ತಾಹವನ್ನು ಕೇಳಿದವರೆಲ್ಲರೂ ವಿಮಾನದಲ್ಲಿ ಕುಳಿತುಕೊಂಡು ಉತ್ತಮ ಲೋಕಕ್ಕೆ ಹೋದರು. ಗೋಕರ್ಣನು ಬಗವಂತನ ಅನುಗ್ರಹದಿಂದ ಗೋಲೋಕ ವನ್ನು ಹೊಂದಿದನು. ಈ ರೀತಿಯಾಗಿ ಭಾಗವತದ ಮಹಿಮೆಯನ್ನು ಸನಕಾದಿಗಳು ಕೇಳಿ ಸಪ್ತಾಹವನ್ನು ಹೇಳಿ ಮುಗಿಸಿದಾಗ ಎಲ್ಲೆಡೆಯಲ್ಲೂ ವಾದ್ಯಘೋಷ್ಟಿ ಕೇಳಿಸಿತು. ಎಲ್ಲರೂ ಸುತ್ತ ಮುತ್ತ ನೋಡುತ್ತಿದ್ದಾರೆ. ಜ್ಞಾನ, ಭಕ್ತಿ ವೈರಾಗ್ಯ ಈ ಮೂವರು ಪರಮ ತಾರುಣ್ಯ ಹೊಂದಿ ಗಾನಮಾಡುತ್ತಾ ಬರುತ್ತಿದ್ದರು. ಎಲ್ಲರಿಗ ಪರಮ ಹರ್ಷವಾ ಯಿತು.

ಇದ್ದಕ್ಕಿದ್ದಂತೆ ಜಯ ಜಯಾಕಾರ ದೇವದುಂದುಭಿನಾದ, ಘಂಟೆ, ವಾದ್ಯ, ತಾಳ, ಮೊದಲಾದ ವಾದ್ಯಗಳು ಕೇಳಲಾರಂಭಿಸಿದವು. ಪುನಃ ಏನಿದು ಎಂದು ಕುತೂಹಲವಾಗಿ ಜನರು ನೋಡುತ್ತಾರೆ. ನೋಡುವುದೇನು? ಸಭೆಯ ಮಧ್ಯದಲ್ಲಿ ಶ್ರೀ ಪರ ಮಾತ್ಮನು ಸರ್ವಾಭರಣಭೂಷಿತನಾಗಿ, ಪೀತಾಂಬರ ಧಾರಿಯಾಗಿ ಕಿರೀಟ, ಕುಂಡಲ, ಹಾರ ಕೇಯೂರ, ವನಮಾಲೆ, ಶ್ರೀವತ್ಸ, ಕೌಸ್ತುಭ, ಇವುಗಳಿಂದ ಕೂಡಿ ಕೊಂಡು ಪರಿವಾರ ಸಮೇತನಾಗಿ ಬಂದು ನಿಂತು ಪ್ರತ್ಯಕ್ಷನಾಗಿ ಎಲ್ಲರಿಗೂ ದರ್ಶನ ಕೊಟ್ಟನು. ಎಲ್ಲರಿಗೂ ಆನಂದವಾಯಿತು.





''ಭಾಗವತ ಸಪ್ತಾಹ ಮಂಗಳ ಉತ್ಸವದಿಂದ ಬಹಳ ಸಂತುಷ್ಟನಾದನು. ಏನು ವರಬೇಕು. ಕೇಳಿರಿ''

ಈ ರೀತಿಯಾಗಿ ಪರಮಾತ್ಮನ ಗಂಭೀರವಾದ ಧ್ವನಿಯನ್ನು ಕೇಳಿ ಸನತ್ಕು ಮಾರರು ಆನಂದ ಭಾಷ್ಪಸುರಿಸುತ್ತ ''ಪರಮಾತ್ಮ! ನೀನು ಇಂದು ನಮಗೆ ದರ್ಶನ ಕೊಟ್ಟಂತೆ ಎಲ್ಲೆಲ್ಲಿ ಸಪ್ತಾಹ ಮಂಗಳವಾಗುತ್ತದೋ ಅಲ್ಲೆಲ್ಲ ನೀನು ನೆಲೆಸಿ ದರ್ಶನ ವಿತ್ತು, ಭಕ್ತರ ಅಭೀಷ್ಟವನ್ನು ಈಡೇರಿಸು'' ಎಂದರು.

ಆವಾಗಿ ಪರಮಾತ್ಮನು ''ತಥಾಸ್ತು'' ಹಾಗೆಯೇ ಆಗಲಿ, ಎಂದು ಹೇಳಿ ಮರೆ ಯಾದನು. ಅಂದಿನಿಂದ ಶ್ರೀ ಕೃಷ್ಣಪರಮಾತ್ಮನು ಎಲ್ಲೆಲ್ಲಿ ಭಾಗವತಸಪ್ತಾಹವು ನಡೆ ಯುತ್ತದೋ ಅಲ್ಲೆಲ್ಲಾ ಕಡೆಗಳಲ್ಲೂ ವಿಶೇಷವಾಗಿ ಸನ್ನಿಹಿತನಾಗಿದ್ದುಕೊಂಡು ಭಾಗವ ತವನ್ನು ಕೇಳುವ ಓದುವ, ಹಾಗೂ ಹೇಳುವ ಜನರನ್ನು ಅನುಗ್ರಹಿಸುತ್ತಾನೆ. ಸರ್ವಾ ಭೀಷ್ಟವನ್ನು ಕೊಟ್ಟು ಕೊನೆಗೆ ಮುಕ್ತಿಯನ್ನು ಕೊಡುತ್ತಾನೆ.

ಆದುದರಿಂದ ಶ್ರೀಮದ್ಭಾಗವತ ಸಪ್ತಾಹವು ಕಲಿಯುಗದಲ್ಲಿ ಪರಮ ಶ್ರೇಯ ಸ್ಸಾಧನವಾಗಿದೆ.

ಶ್ರೀಕೃಷ್ಣಾರ್ಪಣಮಸ್ತು